ಬೇಡಿಕೆಯನ್ನಿಟ್ಟರು. ಈ ಬೇಡಿಕೆಯನ್ನು ತಕ್ಷಣ ಒಪ್ಪಲಾಯಿತು. ಮರುದಿನವೂ ಸಹ ಮಗ ತಮ್ಮನ್ನು ಭೇಟಿಯಾಗಲು ಬರುತ್ತಾನೆ ಎಂಭ ಭರವಸೆಯಲ್ಲಿದ್ದ ಬಾ ಅವರ ಬಾಡಿದ ಮುಖದಲ್ಲಿ ಮುಗುಳ್ನಗೆ ಮೂಡಿತು.

ಮರುದಿನ ಬಾ ಅವರ ಮುಖ ಗೆಲುವಾಗಿತ್ತು. ಆರೋಗ್ಯದಲ್ಲಿ ಸುಧಾರಣೆಯಾಗಿದೆ ಎಂದು ತೋರುತ್ತಿತ್ತು. ಪೆನ್ಸಿಲಿನ್ ಇನ್ನೂ ತಲುಪಿರಲಿಲ್ಲ, ಆದರೆ ಹರಿಲಾಲನನ್ನು ನೋಡಿದ ಮಾತ್ರದಿಂದಲೇ ಬಾ ಅವರ ಮನಸ್ಸಿಗೆ ನೆಮ್ಮದಿ ಲಭಿಸಿತ್ತು, ಅದು ಅವರ ಆರೋಗ್ಯದ ಮೇಲೂ ಪ್ರಭಾವವನ್ನು ಬೀರಿತ್ತು. ಬೆಳಿಗ್ಗೆ ನಿತ್ಯದ ಕೆಲಸ ಕಾರ್ಯಗಳಿಂದ ಬಿಡುವು ಪಡೆದು ಬಾಪೂ ಅವರ ಬಳಿ ಬಂದು ಕೂತಾಗ, ಬಾ ಅವರು ತಮ್ಮ ದೃಷ್ಟಿಯನ್ನು ಬಾಪೂ ಅವರ ಮೇಲೆ ನೆಟ್ಟರು.

'ಹರಿಲಾಲ ಇನ್ನೂ ಯಾಕೆ ಬರಲಿಲ್ಲ? ಅವನನ್ನು ಜೈಲಿನ ಅಧಿಕಾರಿಗಳು ಮತ್ತೆ ತಡೆಯಲಿಲ್ಲ ತಾನೇ?' ಬಾ ಅವರಿಗೆ ಸಂದೇಹ ಮೂಡಿತು.

'ನೀನು ಚಿಂತಿಸಬೇಡ, ಬಾಪೂ ಅವರು ವಿಶ್ವಾಸದಿಂದ ಹೇಳಿದರು, 'ಹರಿಲಾಲ ತನಗೆ ಬೇಕಾದಾಗ ಇಲ್ಲಿಗೆ ಬರಲು ಅನುಮತಿ ಸಿಕ್ಕಿದೆ.'

'ಹಾಗಾದರೆ ಸರಿ' ಬಾ ಅವರು ಮೆಲ್ಲನೆ ಹೇಳಿದರು, 'ಆದರೆ ನನಗೆ ಈ ಸರ್ಕಾರದ ಮೇಲೆ ವಿಶ್ವಾಸವಿಲ್ಲ. ಹರಿಲಾಲ ಇನ್ನೂ ಬರಲಿಲ್ಲ...?'

ಬಾ ಅವರು ಹರಿಲಾಲನ ಹೆಸರನ್ನೇ ಜಪಿಸುತ್ತಿದ್ದರು. ದೇವದಾಸ ಅಷ್ಟರಲ್ಲಿ ಬಂದಿದ್ದ, ಆದರೆ ಹರಿಲಾಲನ ಸುಳಿವೇ ಇರಲಿಲ್ಲ. ಆಗಾ ಖಾಂ ಮಹಲ್‌ನ ಜೈಲುವಾಸಿಗಳು ಬಾ ಅವರ ಹಾಸಿಗೆಯ ಬಳಿ ಬಂದು ಪ್ರಾರ್ಥನೆಯನ್ನು ಮಾಡುತ್ತಿದ್ದರು. ಬಾಪೂ ಸ್ವಸ್ಥ ಚಿತ್ತದಿಂದ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಸಂಜೆಯಾಯಿತು, ಆಗಲೂ ಬಾ ಹರಿಲಾಲನ ಬಗ್ಗೆಯೇ ಪದೇ ಪದೇ ವಿಚಾರಿಸುತ್ತಿದ್ದರು. ಹಿಂದಿನ ದಿನ ಬಾ ಅವರನ್ನು ಭೇಟಿಯಾಗಿದ್ದ ಹರಿಲಾಲ ಎಲ್ಲಿಗೆ ಹೋದ ಎಂದು ಯಾರಿಗೂ ತಿಳಿದಿರಲಿಲ್ಲ. ಎಲ್ಲರೂ ಕಾತುರದಿಂದ ಅವನನ್ನು ನಿರೀಕ್ಷಿಸುತ್ತಿದ್ದರು. ಒಮ್ಮೆ ಜೈಲು ಅಧಿಕಾರಿಗಳನ್ನೂ ಕೇಳಲಾಯಿತು. ಆದರೆ ಹರಿಲಾಲ ಬರುವ ಬಗ್ಗೆ ತಿಳಿಯಲಿಲ್ಲ. ಎಲ್ಲರ ಕಳವಳಕ್ಕೆ ಕೊನೆಯೇ ಇರಲಿಲ್ಲ. ರಾತ್ರಿಯೂ ಕಳೆಯಿತು. ಬಾ ಅವರ ಕಣ್ಣುಗಳಲ್ಲಿದ್ದ ಕಾಂತಿ ಮಂದವಾಯಿತು. ಈಗ ಅವರಿಂದ ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ, ಆದರೆ ಅವರ ಮೌನದ ಹಿಂದಿದ್ದ ವೇದನೆ ಎಲ್ಲರಿಗೂ ಅರ್ಥವಾಗುತ್ತಿತ್ತು.

* * *

ಮರುದಿನ ಬಾ ಅವರ ಆರೋಗ್ಯ ಮತ್ತಷ್ಟು ಹದಗೆಟ್ಟಿತು. ಒಮ್ಮೊಮ್ಮೆ ಅವರು ಪ್ರಜ್ಞೆ ತಪ್ಪುತ್ತಿದ್ದರು. ಅವರ ದೃಷ್ಟಿ ಹರಿಲಾಲನನ್ನು ಅರಸುತ್ತಿರವಂತೆ ತೋರುತ್ತಿತ್ತು. ಆಗಲೇ ಅಕಸ್ಮಾತ್ ಜೈಲಿನ ಅಧೀಕ್ಷಕರು ಬಂದು ಹೇಳಿದರು, 'ಬಾ ಮಾತಾ, ಇಂದು ಹರಿಲಾಲ ಖಂಡಿತ ಬರುತ್ತಾನೆ. ಅವನು ನನಗೆ ಬೆಳಿಗ್ಗೆ ಫೋನ್ ಮಾಡಿದ್ದ.'

'ಟೆಲಿಫೋನ್? ಹರಿಲಾಲ ಮಾಡಿದ್ದನೆ?' ಬಾ ಅವರ ತುಟಿಗಳು ಕಂಪಿಸಿದವು, 'ಅವನೆಲ್ಲಿದ್ದಾನೆ, ಭೈಯ್ಯಾ?'

'ಹರಿಲಾಲ ಪೂನಾದಲ್ಲಿಯೇ ಇದ್ದಾನೆ. ನೀವೇನೂ ಚಿಂತಿಸಬೇಡಿ.'

'ಮತ್ಯಾಕೆ ಅವನು ಬರಲಿಲ್ಲ? ನೀವು ಅವನನ್ನು ತಡೆದಿರಲಿಲ್ಲ ತಾನೇ? ಪಾಪ, ತುಂಬಾ ಕಷ್ಟದಲ್ಲಿದ್ದಾನೆ.'

'ಬಾ ಮಾತಾ, ನಮ್ಮನ್ನು ನಂಬಿ, ನಾವು ಅವನನ್ನು ತಡೆದಿಲ್ಲ.'

'ಹಾಗಾದರೆ ನಿನ್ನೆ ಯಾಕೆ ಬರಲಿಲ್ಲ? ನಾನಿನ್ನು ಹೆಚ್ಚು ದಿನ ಬದುಕಲಾರೆ.' ಬಾ ಅವರ ಸ್ವರ ತಡಬಡಿಸಿತು.

'ಬಾಪೂ,' ಜೈಲಿನ ಅಧೀಕ್ಷಕರು ಬಾಪೂ ಅವರನ್ನು ನೋಡುತ್ತಾ ಹೇಳಿದರು, 'ಹರಿಲಾಲ ನನಗೆ ಫೋನ್ ಮಾಡಿ, ನಿನ್ನೆ ಮಧ್ಯಾಹ್ನ ನನಗೆ ತುಂಬಾ ನಿದ್ದೆ ಬಂದಿತ್ತು, ಅದಕ್ಕೇ ಬರಲಿಲ್ಲ ಎಂದು ಹೇಳಿದ್ದ.'

ಎಲ್ಲರಿಗೂ ಆಶ್ಚರ್ಯವಾಯಿತು. ಬಾ ಅವರು ಕಣ್ಣುಗಳನ್ನು ಮುಚ್ಚಿಕೊಂಡರು. ಕಣ್ಣುಗಳ ಅಂಚಿನಲ್ಲಿ ಕಣ್ಣೀರಿತ್ತು. ಬಾಪು ನಿರ್ವಿಕಾರತೆಯಿಂದ ಎಲ್ಲವನ್ನೂ ನೋಡುತ್ತಿದ್ದರುಕೇಳುತ್ತಿದ್ದರು. ಬಾ ಅವರ ಪರಿಸ್ಥಿತಿಯನ್ನು ನೋಡಿ ಅಂದು ಮಧ್ಯಾಹ್ನ ಯಾರಿಗೂ ನಿದ್ರೆ ಬಂದಿರಲಿಲ್ಲ. ಆದರೆ ಮಧ್ಯಾಹ್ನದ ವೇಳೆಗೆ ಹರಿಲಾಲ ವಾಸ್ತವವಾಗಿಯೂ ಬಂದ. ಅದೇ ಉಡುಪು...ಅದೇ ನಡಿಗೆ...ಅದೇ ದುರವಸ್ಥೆ... ಕೈಯಲ್ಲಿ ಒಂದು ಚೀಲ...ಕಣ್ಣುಗಳು ಕೆಂಪಾಗಿದ್ದವು. ಅವನ ಕಾಲುಗಳು ನೆಲದಲ್ಲಿ ಸ್ಥಿರವಾಗಿ ನಿಲ್ಲದೆ ತಡಬಡಿಸುತ್ತಿದ್ದವು. ಬರುವಾಗ ಅವನು ಮೊದಲು ಬಾಗಿಲನ್ನು ಆಸರೆಯಾಗಿ ಹಿಡಿದುಕೊಂಡ. ನಂತರ ಗೋಡೆಯ ಆಸರೆಯಲ್ಲಿ ಬಾ ಅವರ ಸಮೀಪಕ್ಕೆ ಬಂದು ನಿಂತ. ಕೋಣೆಯಲ್ಲಿ ನಿಶ್ಶಬ್ದತೆ ಕವಿಯಿತು. ಎಲ್ಲರ ಬಾಯಿಗೆ ಹೊಲಿಗೆ ಬಿದ್ದಿತ್ತು. ಎಲ್ಲರ ಕಣ್ಣುಗಳು ಎವೆಯಿಕ್ಕದೆ ನೋಡುತ್ತಿದ್ದವು.

'ಅಮ್ಮಾ...' ಹರಿಲಾಲ ಬಾ ಅವರಿಗೆ ಕೈಮುಗಿದ, ನಂತರ ಕೈಚಾಚಿ ಅವರ ಕಾಲುಗಳನ್ನು ಸ್ಪರ್ಶಿಸಿದ, 'ಅಮ್ಮಾ, ನಿಮ್ಮ ಆರೋಗ್ಯ ಹೇಗಿದೆ?'

ಬಾ ಅವರು ಕಣ್ಣುಗಳನ್ನು ತೆರೆದರು. ಕಣ್ಣುಗಳಲ್ಲಿ ಕಾಂತಿ ಮೂಡಿತು.

ಹರಿಲಾಲ ಸ್ವಲ್ಪ ಮುಂದಕ್ಕೆ ಬಂದು ಅವರ ತಲೆಯ ಬಳಿ ನಿಂತಿದ್ದ. ಬಾ ಮೂಗನ್ನು ಮುಚ್ಚಿಕೊಂಡರು. ಹರಿಲಾಲ ಮತ್ತೆ ತಡಬಡಿಸಿದ. ಅವನ ಉಸಿರಿನಲ್ಲಿದ್ದ ಸಾರಾಯಿಯ ತೀಕ್ಷ್ಣ ದುರ್ಗಂಧ ಇಡೀ ಕೋಣೆಯನ್ನು ಆವರಿಸಿತ್ತು.

'ಹರಿ...' ಬಾ ಅವರ ಮುಖದಲ್ಲಿ ವ್ಯಗ್ರತೆ ಆವರಿಸಿತು. ಅವರು ದೀರ್ಘವಾಗಿ ನಿಟ್ಟುಸಿರು ಬಿಟ್ಟರು, 'ನೀನು...ನೀನು...ಹೆಂಡ ಕುಡಿದು ಬಂದಿದ್ದೀಯ. ನಿನ್ನನ್ನು ಹೆಂಡ ಕುಡಿದ ಅವಸ್ಥೆಯಲ್ಲಿ ನೋಡುವುದು ನನ್ನ ಹಣೆಯಲ್ಲಿ ಬರೆದಿದೆ, ಹರಿ?' ಬಾ ರೋದಿಸಿದರು. ಅಲ್ಲಿ ನಿಂತಿದ್ದವರ ಕಣ್ಣುಗಳು ತುಂಬಿ ಬಂದವು.

'ಅಮ್ಮಾ, ನಾನು ಹೆಂಡ ಕುಡಿದಿಲ್ಲ...' ಹರಿಲಾಲ ತನ್ನ ಕೊಳಕು ಹಲ್ಲುಗಳನ್ನು ತೋರಿಸುತ್ತಾ ಬಹು ಕಷ್ಟದಿಂದ ಹೇಳಿದ.

'ನೀನು ಸುಳ್ಳು ಹೇಳುತ್ತಿದ್ದೀಯ,' ಬಾ ಬಿಕ್ಕಳಿಸಿದರು, 'ಓಹ್, ಇದು ನನ್ನ ಪೂರ್ವಜನ್ಮದ ಪಾಪದ ಫಲ, ಇದನ್ನೆಲ್ಲಾ ನಾನು ನೋಡಬೇಕಾಯಿತು... ಹೇ ಗೋವಿಂದ... ಹೇ ಪ್ರಭು!' ಬಾ ಕಿರುಚಿದರು. ಓಲಾಡುತ್ತಾ ಮತ್ತೆ ಕೂತ ಹರಿಲಾಲನನ್ನು ನೋಡುತ್ತಾ, ಹೊದಿಕೆಯನ್ನು ಎದೆಯಿಂದ ಸರಿಸಿ, ಎರಡೂ ಕೈಗಳಿಂದ ತಲೆಗೆ ಹೊಡೆದುಕೊಂಡರು.

'ಹರಿ...ಹರಿ...ಬೇಟಾ...ನೀನು ನನ್ನ ಈ ಕೊನೆಯ ದಿನಗಳಲ್ಲಿ ಈ ದುಃಖವನ್ನೇಕೆ ಕೊಟ್ಟೆ?... ಗೋವಿಂದ, ಗೋವಿಂದ...ಪ್ರಭು.'

ಅಲ್ಲಿಯೇ ನಿಂತಿದ್ದ ಬಾಪೂ ಮತ್ತು ದೇವದಾಸ, ಬಾ ಅವರ ಕೈಗಳನ್ನು ಹಿಡಿದುಕೊಂಡರು. ಏನೂ ಆಗದಂತೆ ಹರಿಲಾಲ ಗೋಡೆಯ ಆಸರೆಯಲ್ಲಿ ಕಣ್ಣುಗಳನ್ನು ಮುಚ್ಚಿ ಕುಳಿತಿದ್ದ. ಇಬ್ಬರು ಬಂದು ಹರಿಲಾಲನಿಗೆ ಆಸರೆ ನೀಡಿ, ಎದ್ದು ನಿಲ್ಲಿಸಿದರು. ಅವನು ಹೀಗೆ ಬಾ ಅವರೆದುರು ತುಂಬಾ ಹೊತ್ತು ನಿಂತಿರುವುದು ಉಚಿತವಾಗಿರಲಿಲ್ಲ. ಎಲ್ಲರೂ ಹರಿಲಾಲನನ್ನು ಹೊರಗೆ ಕರೆದೊಯ್ದರು. ಬಾ ಅವರ ಬಿಕ್ಕಳಿಗೆಗಳು ಕೋಣೆಯ ಗೋಡೆಗಳಿಗೆ ಡಿಕ್ಕಿ ಹೊಡೆದು ಮರಳಿ ಬರುತ್ತಿದ್ದವು. ಬಾಪೂ ಅವರು ಅಸಹಾಯಕ ಪ್ರೇಕ್ಷಕರಾಗಿ ಎಲ್ಲವನ್ನೂ ನೋಡುತ್ತಿದ್ದರು. ದೇಶದ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುವ ಬಾಪೂ ಅವರು ಏನೂ ತೋಚದೆ ನಿಂತಿದ್ದರು. ಸ್ವಲ್ಪ ಹೊತ್ತಿಗೆ ಬಾ ತಮ್ಮ ಪ್ರಜ್ಞೆಯನ್ನು ಕಳೆದುಕೊಂಡರು. ಪ್ರಜ್ಞಾವಸ್ಥೆಯಲ್ಲಿನ ವ್ಯಥೆಗಿಂತ ಪ್ರಜ್ಞೆ ಕಳೆದುಕೊಂಡಾಗಿನ ಸುಖ ಶಾಂತಿ ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು. ಸಂಜೆ ಜೈಲಿನ ಅಧಿಕಾರಿಗಳು ಪೆನ್ಸಿಲಿನ್ ಔಷಧಿ ಬಂದಿರುವ ಬಗ್ಗೆ ಸುದ್ದಿಯನ್ನು ಹೇಳಿದರು. ಆಗಲೂ ಸಹ ಬಾ ಅವರು ಮೂರ್ಛಾವಸ್ಥೆಯಲ್ಲಿಯೇ ಇದ್ದರು. ವೈದ್ಯರು ಬಾ ಅವರ ನಾಡಿ ಮತ್ತು ಹೃದಯದ ಬಡಿತವನ್ನು ಪರೀಕ್ಷಿಸಿ ಕೈ ಜೋಡಿಸಿದರು. ಪೆನ್ಸಿಲಿನ್ ಇಂಜೆಕ್ಷನ್ ಕೊಟ್ಟ ನಂತರ ಬಾ ಅವರ ಉಸಿರಾಟ ಸ್ವಲ್ಪ ಹೊತ್ತು ಮುಂದುರೆಯಿತು, ಮತ್ತೇನೂ ಮಾಡಲು ಸಾಧ್ಯವಿರಲಿಲ್ಲ. ಇಂಜೆಕ್ಷನ್ ಬಾ ಅವರ ದುರ್ಬಲ ಶರೀರಕ್ಕೆ ತುಂಬಾ ನೋವು ಕೊಡುತ್ತದೆ ಎಂಬುದನ್ನು ತಿಳಿದೂ ಸಹ ದೇವದಾಸ ವೈದ್ಯರಿಗೆ ಬಾ ಅವರನ್ನು ಉಳಿಸಿಕೊಳ್ಳಲೋಸುಗ, ಕೊನೆಯ ಪ್ರಯತ್ನವೆಂಬಂತೆ ಪ್ರಾರ್ಥಿಸಿದ. ಬಾಪೂ ಅವರಿಗೆ ದೇವದಾಸನ ಇಚ್ಛೆ ತಿಳಿದಾಗ ಅವರು ಇಷ್ಟನ್ನೇ ಹೇಳಿದರು

'ದೇವದಾಸ, ನೀನು ನಿನ್ನ ತಾಯಿಗೆ ವಿಶ್ರಾಂತಿಯನ್ನು ಪಡೆಯಲು ಬಿಡುವುದಿಲ್ಲ. ಅವಳಿಗೆ ಅದ್ಭುತ ಔಷಧಿಗಳು ಸಿಗಬಹುದು! ನಿಮ್ಮೆಲ್ಲರ ಆಗ್ರಹವನ್ನು ನಾನೂ ಒಪ್ಪುತ್ತೇನೆ. ಆದರೆ ನಿನ್ನ ಅಭಿಪ್ರಾಯ ಶುದ್ಧ ತಪ್ಪು. ಇವಳು ಎರಡು ದಿನಗಳಿಂದ ಆಹಾರ, ಔಷಧಿಗಳನ್ನು ಬಿಟ್ಟಿದ್ದಾಳೆ. ಈಗ ಇವಳ ಜೀವನ ದೇವರ ಕೈಯಲ್ಲಿದೆ. ನೀನು ಬೇಕಾದರೆ ಈ ಮಧ್ಯೆ ತಲೆ ಹಾಕಬಹುದು, ಆದರೆ ನೀನೇನು ಮಾಡಬೇಕೆಂದಿದ್ದೀಯೋ, ಅದಕ್ಕೆ ನನ್ನ ಸಲಹೆ ಇಲ್ಲ. ಸ್ವಲ್ಪ ಯೋಚಿಸು. ಸಾಯುತ್ತಿರುವ ನಿನ್ನ ತಾಯಿಗೆ ಪ್ರತಿ ನಾಲ್ಕುಆರು ಗಂಟೆಗೊಮ್ಮೆ